ಓ ಎಸ್ 199/17

ಡಿ ಡಬ್ಲ್ಯೂ **-1**

**ದಿಃ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಪಾಟೀ ಸವಾಲು ಃ ವಾದಿ ಪರ ಶ್ರೀ. ಎಸ್ ಎನ್ ವಕೀಲರಿಂದ ಃ

ನಾನು ವಕೀಲ ವೃತ್ತಿಯನ್ನು ಮಾಡುತ್ತೇನೆ. ನಾನು ಈ ದಾವೆಯಲ್ಲಿ ಹಾಕಿರುವ ದಾಖಲಾತಿಗಳು ಮತ್ತು ಇತರೆ ದಾಖಲಾತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ವಾದಿಯ ತಂದೆ ಕಾಳಿಂಗಯ್ಯರವರ ಕುಟುಂಬದ ಹಿನ್ನಲೆ ನನಗೆ ಗೊತ್ತಿರುತ್ತದೆ ಎಂದರೆ ಕೆಲವು ವಿಷಯಗಳು ಮಾತ್ರ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಕಾಳಿಂಗಯ್ಯರವರಿಗೆ ಲಕ್ಕಪ್ಪ, ದರೋಗ್, ಮರಳಿಯಪ್ಪ, ಭದ್ರಯ್ಯ ಮತ್ತು ಸೀತಾರಾಮಯ್ಯ ಎನ್ನುವ ಮಕ್ಕಳು ಇದ್ದರು ಎಂದರೆ ಸರಿ. ಕಾಳಿಂಗಯ್ಯರವರು 1974ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅದೇ ವರ್ಷದ ಆಸು ಪಾಸಿನಲ್ಲಿ ಕಾಳಿಂಗಯ್ಯರವರ ಹೆಂಡತಿ ತೀರಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಕಾಳಿಂಗಯ್ಯರವರ ತಂದೆ ಹುಲಿಯಪ್ಪರವರಿಗೆ ಸಂಬಂದಪಟ್ಟ ಸ್ವತ್ತಾಗಿರುತ್ತದೆ ಎಂದರೆ ಸಾಕ್ಷಿ ಕಾಳಿಂಗಯ್ಯರವರಿಗೆ ಸೇರಿದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಹುಲಿಯಪ್ಪರವರ ಮರಣದ ನಂತರ ಕಾಳಿಂಗಯ್ಯರವರ ಹೆಸರಿಗೆ ದಾವಾ ಸ್ವತ್ತುಗಳ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಕಾಳಿಂಗಯ್ಯನಿಗೆ ಖಾತೆ ಇತ್ತು ಹುಲಿಯಪ್ಪ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಾಳಿಂಗಯ್ಯರವರ ಹೆಸರಿಗೆ 1980 ರ ಆಸು ಪಾಸು ವರೆಗೂ ಕಂದಾಯ ದಾಖಲಾತಿಗಳು ಇತ್ತು ಎಂದರೆ ಸುಳ್ಳು. ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ಇರುವುದು ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ 1980ರವರೆವಿಗೂ ಕಾಳಿಂಗಯ್ಯರವರ ಹೆಸರು ಕಾಣಿಸುತ್ತದೆ ಎಂದರೆ ಸುಳ್ಳು.

ದಿನಾಂಕಃ 14-04-1969ರ ಕ್ರಯಪತ್ರದಂತೆ ಕಾಳಿಂಗಯ್ಯ, ಭದ್ರಯ್ಯ, ಲಕ್ಕಪ್ಪ, ಸೀತಾರಾಮಯ್ಯ ಮತ್ತು ಹುಲಿಯಪ್ಪ ರವರು ನಮ್ಮ ತಂದೆಗೆ ಪೂರ್ವ ಪಶ್ಚಿಮ 35 ಗಜ, ಉತ್ತರ ದಕ್ಷಿಣ 60 ಗಜ ಮಾರಾಟ ಮಾಡಿದ್ದರು ಎಂದರೆ ಸರಿ. ಒಂದು ಗಜ ಎಂದರೆ 3 ಅಡಿ ಎಂದರೆ ಸರಿ. ಸದರಿ ಜಮೀನು 2100 ಗಜ ಆಗುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರದ ಪ್ರಕಾರ ಸುಮಾರು 6300 ಅಡಿ ಜಮೀನನ್ನು ಮಾರಾಟ ಮಾಡಲಾಗಿತ್ತು ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ಸದರಿ ಜಮೀನು ಸುಮಾರು 18 1/2 ಸಾವಿರ ಚದರ ಅಡಿ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನು 18 1/2 ಚದರ ಅಡಿ ಜಮೀನು ಬರುವುದಿಲ್ಲ ನಾನು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಇಚ್ಛೆಯಿಂದ ವಾದಿಗಳ ನೋಟಿಸ್‌ನಲ್ಲಿ 18 ಗುಂಟೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಜರುಮಾಡಿರುವ ನಿಡಿ5 ತಿಳುವಳಿಕೆ ನೋಟಿಸ್ ವಾದಿಗಳು ನನಗೆ ಕಳುಹಿಸಿಲ್ಲ ಎಂದು ಸೂಚಿಸಿದರೆ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನೋಟಿಸ್ ಕಳುಹಿಸಿರುತ್ತಾರೆ ಎಂದು ನಾನು ಹೇಳುತ್ತಿದ್ದು ಆ ನೋಟಿಸ್ ನನಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಅಂಚೆಯ ಮುಖಾಂತರ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅಂಚೆಯ ಮುಖಾಂತರ ಬಂದಿರುವುದಕ್ಕೆ ನಾನು ನ್ಯಾಯಾಲಯಕ್ಕೆ ಸದರಿ ಅಂಚೆಯ ಕವರ್ ಮತ್ತು ನೋಟಿಸನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅಂಚೆ ಕವರನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ಕೊಡುವ ಸಂದರ್ಭದಲ್ಲಿ ತಪ್ಪಿ ರಬಹುದು ಎಂದು ನುಡಿಯುತ್ತಾರೆ. ನಾನು ವಕೀಲರು ಆಗಿರುವುದರಿಂದ ನಿಡಿ5 ನೋಟಿಸನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು.

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**